ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ)94(323)

ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ)ರಾಜ್ಯದಲ್ಲಿ ಕೊಳ್ಳೇಗಾಲ ಕ್ಷೇತ್ರದಲ್ಲಿ ಅತೀ ಹೆಚ್ಚು ನೀರಾವರಿಯ ದೊಡ್ಡ ಕೆರೆಗಳಿದ್ದು, ಹೂಳು ತುಂಬಿ ನೀರು ಶೇಖರಣೆಗೆ ತೊಂದರೆಯಾಗಿರುವುದು ಗಮನಕ್ಕೆ ಬಂದಿದೆಯೇ?

ಆ) ಕೊಳ್ಳೇಗಾಲದ ಕ್ಷೇತ್ರಕ್ಕೆ ಸೇರಿರುವ ಕೆರೆಗಳೆಷ್ಟು?

ಇ) ಈ ಬಗ್ಗೆ ಈ ಹಿಂದೆ ಕೋರಿಕೆ ಸಲ್ಲಿಸಿದ್ದಾಗ್ಯೂ ಈವರೆಗೆ ಕೈಗೊಂಡ ಕ್ರಮಗಳೇನು?

ಈ)ಎಷ್ಟು ಕೆರೆಗಳನ್ನು ಈ ಸಾಲಿನಲ್ಲಿ ಅಭಿವೃದ್ದಿಪಡಿಸಲು ಉದ್ದೇಶಿಸಲಾಗಿದೆ?

ಉ) ಎಷ್ಟು ವರ್ಷಗಳಲ್ಲಿ ಈ ಎಲ್ಲಾ ಕೆರೆಗಳನ್ನು ಅಭಿವೃದ್ಧಿಗೊಳಿಸಲಾಗುವುದು?

ಶ್ರೀ ಕೆ ಎಸ್ ಈಶ್ವರಪ್ಪ

ಅ) ಬಂದಿದೆ

ಆ) 24 ಕೆರೆಗಳು

ಇ) 2006–07ನೇ ಸಾಲಿನಲ್ಲಿ 15 ಕೆರೆಗಳಲ್ಲಿ ಸಣ್ಣ ಪುಟ್ಟ ದುರಸ್ತಿ, ಬೌಂಡರಿ ಟ್ರೆಂಚ್ ನಿರ್ಮಿಸಿ ಬೌಂಡರಿ ಕಲ್ಲುಗಳನ್ನು ನೆಡುವ ಕಾರ್ಯವನ್ನು ರೂ 61 94 ಲಕ್ಷಗಳ ವೆಚ್ಚದಲ್ಲಿ ಕೈಗೊಳ್ಳಲಾಗಿದೆ

ಈ) 12 ಕೆರೆಗಳು

ಉ) ಉಳಿದ ಕೆರೆಗಳನ್ನು ಪುನರುಜ್ಜೀವನ ಕಾಮಗಾರಿಗಳನ್ನು ಲಭ್ಯವಾಗುವ ಅನುದಾನಕ್ಕೆ ಅನುಗುಣವಾಗಿ ಹಂತಹಂತವಾಗಿ ಕೈಗೆತ್ತಿ ಕೊಳ್ಳಲಾಗುವುದು

ಶ್ರೀ ಬಸವರಾಜು ಎ ಎಸ್ 96(355)

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರ,

ಅ) ಅರಸೀಕೆರೆ ಪುರಸಭೆಯಲ್ಲಿ ಕಳೆದ 3 ವರ್ಷಗಳಿಂದ ಇಲ್ಲಿಯ ವರೆಗೂ ಕೊಟ್ಟಿರುವ ಆಶ್ರಯ ಮನೆಗಳ ಸಂಖ್ಯೆ ಎಷ್ಟು?

ಆ) ಈ ಆಶ್ರಯ ಮನೆಗಳನ್ನು ಯಾವ ಆಧಾರದ ಮೇಲ ನಿರ್ಮಿಸಲಾಗಿದೆ

ಇ) ಆಶ್ರಯ ಮನೆಗಳನ್ನು ಸಾಲದ ರೂಪದಲ್ಲಿ ಕೊಟ್ಟಿದ್ದಾರೆ, ಸಾಲವನ್ನು ಯಾವ ಯೋಜನೆಗಳಲ್ಲಿ ಕೊಡಲಾಗಿದೆ,

ಈ) ಅಸಲು ಮೊತ್ತ ಮರುಪಾವತಿ ಆಗಿದೆಯೇ ವಸೂಲಾತಿಗೆ ಏನು ಕ್ರಮ ಕೈಗೊಳ್ಳಲಾಗಿದೆ,

ಉ) ಫಲಾನುಭವಿಗಳು ಸಾಲವನ್ನು ಮರುಪಾವತಿಸಲು ಶಕ್ತರಾಗಿದ್ದಾರೆಯೇ, ಸಾಲದ ಮೊತ್ತದ ಹಾಗೂ ಬಡ್ಡಿ ಮರುಪಾವತಿಸಲು ಅಶಕ್ತರಾದವರಿಗೆ ಸಾಲ ಮನ್ನಾ ಮಾಡುವ ಬಗ್ಗೆ ಸರ್ಕಾರದ ಚಿಂತನೆ ನಡೆಸಿದೆಯೇ?

ಶ್ರೀ ಡಿ ಟಿ ಜಯಕುಮಾರ್

ಅ)ಅರಸೀಕೆರೆ ಪುರಸಭೆ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ಒಟ್ಟು 490 ಆಶ್ರಯ ಮನೆಗಳನ್ನು ನೀಡಲಾಗಿದೆ ವಿವರ ಇಂತಿದೆ